**ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಘನ ನ್ಯಾಯಾಲಯ ಬ್ಯಾಡಗಿ.**
**ಕ್ರಿಮಿನಲ್ ಪ್ರಕರಣ ಸಂಖ್ಯೆ: 144/2019**

ಪಿಡಬ್ಲ್ಯೂ: 5

ಸಿಡಬ್ಲ್ಯೂ: 5

ಹೆಸರು : ಮಂಜುನಾಥ ತಂದೆ: ಮಲ್ಲಪ್ಪ ಕಾಳೆ

ವಯಸ್ಸು : 47 ವರ್ಷ

ಉದ್ಯೋಗ : ವ್ಯಾಪಾರ

ವಾಸಸ್ಥಳ : ಬ್ಯಾಡಗಿ

ದಿನಾಂಕ : 14.09.2022 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ :**

1) ಚಾಸಾ-1 ನನ್ನ ತಮ್ಮ ಇದ್ದು, ನಾವು ಬ್ಯಾಡಗಿ-ರಟ್ಟೀಹಳ್ಳಿ ರಸ್ತೆಯಲ್ಲಿ ಓಂ ಕಮ್ಯೂನಿಕೇಷನ್ ಎಂಬ ನಾಮದೇಯದ ಮೊಬೈಲ್ ಅಂಗಡಿಯನ್ನು ನಡೆಸುತ್ತಾ ಇದ್ದು, ಸದರಿ ಅಂಗಡಿಯುಲ್ಲಿ ಚಾಸಾ-6 ರವರು ಏರಟೆಲ್ ಕಂಪನಿಯ ಪ್ರಮೋಟರ್ ಎಂದು ಕೆಲಸ ಮಾಡುತ್ತಾನೆ. ದಿ: 18.12.2018 ರಂದು ರಾತ್ರಿ 09-30 ಗಂಟೆ ಸುಮಾರಿಗೆ ನಾವು ಮೊಬೈಲ್ ಅಂಗಡಿಯನ್ನು ಮುಚ್ಚಿ ಮನೆಗೆ ತೆರಳಿರುತ್ತೇವೆ .

2) ನಂತರ ಮಾರನೇ ದಿನ ಬೆಳಗ್ಗೆ ಸುಮಾರು 07.-00 ಗಂಟೆಗೆ ಚಾಸಾ-2 ರವರು ದೂರವಾಣಿ ಕರೆಯನ್ನು ಮಾಡಿ ನಮ್ಮ ಅಂಗಡಿಯ ಶೆಟ್ಟರನ್ನು ಅರ್ಧ ತೆರೆಯಲಾಗಿದ್ದು, ಯಾರೋ ಕಳ್ಳತನ ಮಾಡಿರುತ್ತಾರೆ ಎಂದು ತಿಳಿಸಿದ್ದು, ನಂತರ ನಾನು, ನನ್ನ ತಮ್ಮ ಚಾಸಾ-1 ರವರು ನಮ್ಮ ಅಂಗಡಿಗೆ ತೆರಳಿ ನೋಡಿದಾಗ ಅಂಗಡಿಯ ಶೆಟ್ಟರ ಅರ್ಧ ತೆರೆದಿದ್ದು ಕಂಡು ಬಂದಿದ್ದು ನಂತರ ಬಗ್ಗಿ ನೋಡಿದಾಗ ವಸ್ತುಗಳೆಲ್ಲಾ ಚೆಲ್ಲ ಪಿಲ್ಲಿ ಯಾಗಿ ಬಿದ್ದಿದ್ದು ಕಂಡು ಬಂದಿರುತ್ತದೆ. ಆ ಸಮಯದಲ್ಲಿ ನಮ್ಮ ಅಂಗಡಿಯ ಮುಂದೆ ಒಂದು ಮುರಿದ ಬೀಗ, ರಾಡ ಹಾಗೂ ಸ್ಕ್ರೂ ಡ್ರೈವರ ಕೆಳಗೆ ಬಿದ್ದಿದ್ದು ಕಂಡುಬಂದಿರುತ್ತದೆ. ಸದರಿ ಮುದ್ದೆ ಮಾಲುಗಳು ಈಗಾಗಲೇ ಮು.ಮಾ-1 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿರುತ್ತಾರೆ.

3) ಘಟನೆಯ ಬಗ್ಗೆ ನನ್ನ ತಮ್ಮ ಚಾಸಾ-1 ಪೋಲೀಸರಿಗೆ ಮಾಹಿತಿ ನೀಡಿದ್ದು, ಪೋಲೀಸರು ಘಟನಾ ಸ್ಥಳಕ್ಕೆ ಬಂದು ಅಂಗಡಿಯ ಶೆಟ್ಟರ ಪೂರ್ತಿ ತೆರೆದು ಒಳಹೋಗಿ ನೋಡಿದಾಗ ವಸ್ತುಗಳೆಲ್ಲಾ ಚೆಲ್ಲ ಪಿಲ್ಲಿ ಯಾಗಿ ಬಿದ್ದಿದ್ದು ಕಂಡು ಬಂದಿರುತ್ತದೆ. ನಂತರ ಪರಿಶೀಲನೆ ಮಾಡಿದಾಗ ರೆಡ್ ಮೀ, ಸ್ಯಾಮಸಂಗ್ , ಓಪ್ಪೋ, ವಿವೋ ಹಾಗೂ ಲಾವಾ ಕಂಪನಿಯ ಒಟ್ಟು 31 ಮೊಬೈಲ್ ಸ್ಮಾರ್ಟ ಫೋನಗಳು ಕಳುವು ಆದದ್ದು ಕಂಡು ಬಂದಿರುತ್ತದೆ. ಘಟನೆಯ ಬಗ್ಗೆ ನನ್ನ ಸಹೋದರ ಚಾಸಾ-1 ಪಿರ್ಯಾದಿಯನ್ನು ನೀಡಿರುತ್ತಾರೆ. ನಾನು ಪೋಲೀಸರಿಗೆ ಘಟನೆಯ ಬಗ್ಗೆ ಹೇಳಿಕೆಯನ್ನು ನೀಡಿರುತ್ತೇನೆ. ಕಳುವು ಗೈದ ಮೊಬೈಲಗಳನ್ನು ಸಾಕ್ಷಿಯು ನಿಪಿ-10 ರಿಂದ ನಿಪಿ-22 ವರೆಗೆ ಕಾಣುವ ಭಾವಚಿತ್ರದಲ್ಲಿ ನೋಡಿ ಗುರುತಿಸಿರುತ್ತಾರೆ. ದಿ: 28.12.2018 ರಂದು ಪ್ರಕರಣಕ್ಕೆ ಸಂಬಂಧಪಟ್ಟಂತೆ ಆರೋಪಿತರನ್ನು ಪೋಲೀಸರು

ತೋರಿಸಿದ್ದು ಅವರನ್ನು ನೋಡಿರುತ್ತೇನೆ. ಇಂದು ನ್ಯಾಯಾಲಯದಲ್ಲಿ 1 ನೇ ಆರೋಪಿತನು ಹಾಜರಿದ್ದು, ಆತನನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. 2 ನೇ ಆರೋಪಿತನು ಗೈರು ಹಾಜರಿದ್ದು, ಆತನ ಗುರುತು ಪತ್ತೆಗಾಗಿ ಆತನ ಪರ ವಕೀಲರು ತಕರಾರು ಇಲ್ಲವೆಂದು ನುಡಿದಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :**

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸ ಅದೆ.

ಸಹಿ/ –

ಜೆಎಂಎಫ್‌ಸಿ, ಬ್ಯಾಡಗಿ.